ಸಾಹುಕಾರರು ‘ನೀವು ಹೇಳೋದು ಸರಿನೇ, ಹೋಗ್ಲಿ ಆಮೇಲವರು ತಿದ್ದುಕೊಂಡರ? ಮುಂದೆ ಕಷ್ಟ ಸುಖಕ್ಕೆ, ಅನುವು–ಆಪತ್ತಿಗೆ ಒದಗುವ ಬುದ್ಧಿ ಅವರಿಗೆ ಬಂತು ತಾನೇ?’ ಅಂದಾಗ ಶೆಟ್ಟರ ಹೆಂಡತಿ ‘ಎಲ್ಲಿಯ ಬದಲಾವಣೆ? ಅವರು ಇನ್ನೂ ಬಿಗಿದುಕೊಂಡು ಬಿಟ್ಟರು. ನಮ್ಮಪ್ಪ ಸತ್ತಾಗಲೇ ಒಬ್ಬರು ಬರದಿದ್ದ ಮೇಲೆ ನೀವೆಲ್ಲ ನಮ್ಮ ಬಾಂಧವರೆ ಅಲ್ಲ. ನಮ್ಮ ಜನ ಜಾತಿ ಅಂತ ನಾನು ಒದ್ದುಕೊಂಡು ಒದ್ದಾಡಿದೆ. – ಹಾಗೇ ಹೀಗೆ ಅಂತ ಕೂಗಾಡಿದರು. ನಾವು ಈ ಊರಲ್ಲಿ ಬದುಕೋಕೆ ನೀವ್ಯಾರು ಬೇಕಾಗೆ ಇಲ್ಲ. ನಮ್ಮ ವಹಿವಾಟಿದೆ, ಊರಿನ ಜನರಿದ್ದಾರೆ ನಮ್ಮ ಕಮ್ಯೂನಿಟಿಯೇ ನಮಗಾಗಬೇಕು ಅಂತೇನು ಇಲ್ಲವಲ್ಲ ಅಂದರು. ಅಷ್ಟು ಮಾತ್ರವಲ್ಲ ವಾಸವಿ ಸಂಘಕ್ಕೆ ಅವರು ಕಟ್ಟಿದ್ದ ದೇಣಿಗೆಯನ್ನು ವಾಪಸ್ಸು ಪಡೆದುಬಿಟ್ಟರು. ಅವರ ಸದಸ್ಯತ್ವವನ್ನು ರದ್ದು ಮಾಡಿಕೊಂಡರು’ ಎಂದಾಗ ಚಕಿತರಾಗಿ ಕತ್ತೆತ್ತಿ ಮಾರ್ಮಿಕವಾಗಿ ತಮ್ಮ ಪತ್ನಿಯನ್ನು ನೋಡುತ್ತಾ ಸಾಹುಕಾರರು ‘ಛೀ, ಎಂಥ ಹೀನ ಬುದ್ಧಿ. ಕೊಟ್ಟಿದ್ದು, ಹಿಂದೆ ತಗೋಳಣ ಅಂಥಂದ್ರೆ... ಮೊದಲೇ ಇವರ ವಿಷಯ ಗೊತ್ತಿದ್ದಿದ್ರೆ ನಾವಿಲ್ಲಿಯವರೆಗೆ ಬರುವ ಕಷ್ಟವೇ ಇರಲಿಲ್ಲ’ ಅಂದುಬಿಟ್ಟರು. ಶೆಟ್ಟರು ‘ದಯವಿಟ್ಟು ಹಾಗೆಲ್ಲ ಭಾವಿಸಬೇಡಿ. ಆ ಹೆಣ್ಣು ಮಗು ಪಾಪದ್ದು, ತುಂಬಾ ವಿನಯವಂತೆ, ಸುಶೀಲೆ ಲಕ್ಷಣವಾಗಿಯೂ ಇದ್ದಾಳೆ. ದೊಡ್ಡವರ ಸಣ್ಣತನಕ್ಕೆ ಆ ಮಗುವೇನು ಮಾಡಿತು?’ ಅಂದಾಗ ‘ವಿಷದ ಭೂಮಿಯಲ್ಲಿ ಫಸಲು ಬೆಳೆದರೆ ಫಸಲು ಅದೆಷ್ಟು ಚೆನ್ನಾಗಿದ್ದರು ಕೊಯ್ದು ತಿನ್ನಲಾದೀತೆ? ಭೂಮಿಗುಣ ಒಂದಷ್ಟು ಬಂದೇ ಇರುತ್ತೆ. ಇಂಥ ಸಂಬಂಧ ನಮಗಂತು ಬೇಡ ಸ್ವಾಮಿ’ ಎಂದು ನಿಷ್ಠುರವಾಗಿ ನುಡಿದರು. ಶೆಟ್ಟರು ಖಿನ್ನರಾಗಿ ‘ನಾವೇ ತಪ್ಪು ಮಾಡಿದೆವೆಂದು ಕಾಣುತ್ತೆ. ಸಾವಿರ ಸುಳ್ಳು ಹೇಳಿ ಮದುವೆ ಮಾಡು ಅಂತಾರೆ ಆದರೆ ನಾನು ಯಾವತ್ತಿನದೋ ಕಥೆ ಹೇಳಿ ಮದುವೆ ತಪ್ಪಿಸಿದ ಹಾಗೇ ಆಯಿತು’ ಎಂದಾಗ ‘ನೀವೇನು ನೊಂದುಕೋಬೇಡಿ. ಆಗೋದೆಲ್ಲ ಒಳ್ಳೆದಕ್ಕೆ ಅಂತಾರೆ ನೋಡಿ ರಾಯರೇ, ನಾವು ಕೋಮಟಿಗರು, ವ್ಯಾಪಾರಿಗಳು. ವ್ಯಾಪಾರಂ ದ್ರವ್ಯ ಚಿಂತನಂ ಅಂತಾರೆ. ಒಂದೊಂದು ಸಾರಿ ಅದು ದ್ರೋಹ ಚಿಂತನೇನು ಆಗಿಬಿಡುತ್ತೆ. ಹಂಗತ ಮನುಷ್ಯತ್ವದ ವಿಷಯಕ್ಕೆ ಬಂದ್ರೆ ನಾವ್ಯಾವತ್ತು ಸಣ್ಣವರಲ್ಲ. ಕೈಲಾಗಿದ್ದು, ಈ ಸಮಾಜಕ್ಕೆ ಮಾಡಬೇಕು, ಋಣ ತೀರಿಸಬೇಕು ಅನ್ನೋರು ನಾವು. ನಮಗೆಲ್ಲ ದುಡ್ಡು ತುಂಬಾ ಮುಖ್ಯ; ಹಂಗಂತ ಅದು ಮನುಷ್ಯರಿಗಿಂತ ಯಾವತ್ತು ದೊಡ್ಡದಲ್ಲ. ಒಂದು ವೇಳೆ ಅವರು ತಿದ್ದಿ ಬುದ್ಧಿ ಕಲಿತು ನಿಮ್ಮೆಲ್ಲರ ಜೊತೆ ಹೊಂದಿಕೊಂಡಿದ್ದರೆ ನಾನಿವತ್ತು ಈ ಸಂಬಂಧವನ್ನು ಬೇಡ ಅಂತಿರಲಿಲ್ಲ. ‘ನನ್ನ ಜೊತೆಗೆ ನನ್ನ ಹಣ, ದುಡಿಮೆ ಇದೆ, ನಿಮ್ಮ ಅವಶ್ಯಕತೆಯೇ ನಮಗಿಲ್ಲ’ ಅನ್ನುವ ಧೋರಣೆ ನನಗೆ ಅರಗಿಸಿಕೊಳ್ಳೋಕೆ ಆಗ್ತಿಲ್ಲ. ಒಟ್ಟಿನಲ್ಲಿ ನೀವಿವತ್ತು ಸಿಕ್ಕಿದ್ದು, ನಮ್ಮ ಪುಣ್ಯವೇ ಸರಿ. ಇಲ್ಲದಿದ್ರೆ ನಾವೀ ಸಂಬಂಧಕ್ಕೆ ಅಸ್ತು ಅಂದು ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತಿತ್ತು’ ಅಂದರು.

> **ಅದೇ... ಅವರ ತಂದೆಯವರ ಸಾವಿಗೆ ಯಾರೂ ಹೋಗಲಿಲ್ಲ ಅಂದೆನಲ್ಲ... ಮಾರನೆದಿನ ಇಪ್ಪತ್ತೊಂಬತ್ತು ಮನೆಗಳಿಂದ ನೂರು ರೂಪಾಯಿಯ ದಂಡ ಮತ್ತೆ ಹೆಚ್ಚುವರಿ ನೂರು ರೂಪಾಯಿ ಸೇರಿಸಿ ಮೂರು ಸಾವಿರ ರೂಪಾಯಿಯನ್ನು ಸಂಘಕ್ಕೆ ಕಟ್ಟಿಬಂದೆ. ಆಗಿಂದ ಆ ಮನೇನ ಮೂರು ಸಾವಿರದ ಮನೆ ಅಂತೀವಿ...**